Government of Karnataka

# ‘ಉದ್ಯೋಗ ಯೋಜನೆ’

# ಸಂಕ್ಷಿಪ್ತ ವರದಿ

**(150 ಸರ್ಕಾರಿ ಐ.ಟಿ.ಐ.ಗಳನ್ನು ಟಾಟಾ ಟೆಕ್ನೊಲೊಜೀಸ್ ಲಿಮಿಟೆಡ್ ರವರ ಸಹಯೋಗದೊಂದಿಗೆ ಮೇಲ್ದರ್ಜೆಗೇರಿಸಿರುವ ಯೋಜನೆ)**

**ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ**

**ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ, ಆಯುಕ್ತಾಲಯ, ಕೌಶಲ್ಯ ಭವನ, ಡೈರಿ ವೃತ್ತ, ಬೆಂಗಳೂರು–29**

**‘ಉದ್ಯೋಗ’ ಯೋಜನೆಯಡಿಯಲ್ಲಿ 2021–22ನೇ ಸಾಲಿನಲ್ಲಿ 150 ಸರ್ಕಾರಿ ಐ.ಟಿ.ಐ.ಗಳನ್ನು ಟಾಟಾ ಟೆಕ್ನೋಲೋಜೀಸ್ ಲಿಮಿಟೆಡ್ ರವರ ಸಹಯೋಗದೊಂದಿಗೆ ಉನ್ನತೀಕರಿಸಿರುವ ಕುರಿತು:**

ಕರ್ನಾಟಕ ರಾಜ್ಯದ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯಲ್ಲಿ 270 ಸರ್ಕಾರಿ, 196 ಅನುದಾನಿತ, 1032 ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಸುಮಾರು 1.8ಲಕ್ಷ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ದಿನಮಾನಕ್ಕೆ ತಕ್ಕಂತೆ ಕೈಗಾರಿಕೆಗಳು ಮತ್ತು ಐ.ಟಿ.ಐಗಳ ನಡುವಿನ ಸ್ಕಿಲ್ ಗ್ಯಾಪ್‌ಅನ್ನು ಹೊಂದಿಸಿಕೊಳ್ಳಲು ಮತ್ತು ಪ್ರಸ್ತುತ ಭವಿಷ್ಯದ ಬೇಡಿಕೆಗಳನುಸಾರ ಯುವಪೀಳಿಗೆಗೆ ಕೌಶಲ್ಯಅಭಿವೃದ್ಧಿಯನ್ನು ಹೆಚ್ಚಿಸಬೇಕಾಗಿರುತ್ತದೆ. ಇತ್ತೀಚಿನ ದಿನಮಾನಗಳಿಗೆ ಅನುಗುಣವಾಗಿ ಆಧುನಿಕ ಯಂತ್ರೋಪಕರಣಗಳನ್ನು ಬಳಸುವ ಕೌಶಲ್ಯವನ್ನು ಹೆಚ್ಚಿಸಿಕೊಳ್ಳುವುದು ಅವಶ್ಯಕವಾಗಿರುತ್ತದೆ. ಈ ಮೂಲಕ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶವನ್ನು ಕಲ್ಪಿಸಲು ಕೈಗಾರಿಕೆಗಳ ಜೊತೆ ಲಿಂಕೇಜ್/ಪಾಲುದಾರಿಕೆ ಮಾಡಿಕೊಂಡು ಟೆಕ್ನೊಲಜಿ ಹಬ್‌ಗಳನ್ನು ತೆರೆದು ರಾಜ್ಯದ/ಹೊರ ರಾಜ್ಯಗಳ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಉದ್ದಿಮೆಗಳ ಬೇಡಿಕೆಗನುಸಾರ ಕೌಶಲ್ಯಾಭಿವೃದ್ಧಿಯನ್ನು ಉನ್ನತೀಕರಣಗೊಳಿಸಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯು TATA Technologies Ltd. ರವರ ಸಹಭಾಗಿತ್ವದಲ್ಲಿ ಮೊದಲ ಹಂತದಲ್ಲಿ 150 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಉನ್ನತೀಕರಿಸುವ **‘ಉದ್ಯೋಗ’** ಯೋಜನೆಯನ್ನು ಅನುಷ್ಠಾನಗೊಳಿಸಿರುತ್ತದೆ.

**‘ಉದ್ಯೋಗ’** ಯೋಜನೆ ಅಡಿಯಲ್ಲಿ ಮೆ.ಟಾಟಾ ಟೆಕ್ನೋಲೊಜೀಸ್ ಲಿಮಿಟೆಡ್ ರವರ ಸಹಯೋಗದೊಂದಿಗೆ 150 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು Skill Hub ಗಳನ್ನಾಗಿ ಉನ್ನತ್ತೀಕರಿಸಲು ರಾಜ್ಯ ಸರ್ಕಾರದ ಪಾಲು ಶೇ.12 ಅದರಂತೆ ರೂ.657ಕೋಟಿ ಅನುದಾನ ನೀಡಲಾಗಿದ್ದು, ಮೆ.ಟಾಟಾ ಟೆಕ್ನೋಲೊಜೀಸ್ ಲಿಮಿಟೆಡ್ ರವರ ಪಾಲು ಶೇ.88 ಆಗಿದ್ದು, ಒಟ್ಟು ರೂ.4080 ಕೋಟಿ ವೆಚ್ಚದಲ್ಲಿ ತರಬೇತಿಗೆ ಯಂತ್ರೋಪಕರಣ ಮತ್ತು ಇತರೆ ಸೌಲಭ್ಯಗಳನ್ನು ಒದಗಿಸುವ ಕುರಿತು ದಿ:06–11–2020ರಂದು ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ದಿ:08–10–2020ರ ಕ್ಯಾಬಿನೆಟ್ ಅನುಮೋದನೆಯಂತೆ ದಿ:12–10–2020ರಂದು ಸರ್ಕಾರಿ ಆದೇಶವನ್ನು ಹೊರಡಿಸಲಾಗಿದೆ. ರಾಜ್ಯ ಸರ್ಕಾರವು ರೂ.220 ಕೋಟಿಗಳ ವೆಚ್ಚದಲ್ಲಿ ಕಟ್ಟಡ ಹಾಗೂ ಇನ್ನಿತರೆ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

150 ಐ.ಟಿ.ಐ. ಗಳನ್ನು ಮೇಲ್ದರ್ಜೆಗೇರಿಸುವ ಸಂಬಂಧ ಸಂಸ್ಥೆಗಳಲ್ಲಿ 7500ಚ.ಅಡಿ ವರ್ಕ್‌ಷಾಪ್ ನಿರ್ಮಾಣ, 1650ಚ.ಅಡಿಗಳ ಟೆಕ್ ಲ್ಯಾಬ್ ನಿರ್ಮಾಣಕ್ಕೆ ಮತ್ತು ಟೆಕ್ ಲ್ಯಾಬ್ ನವೀಕರಣಕ್ಕೆ ಸಂಬಂಧಿಸಿದಂತೆ ಸಂಸ್ಥೆಯ ಕಟ್ಟಡದಲ್ಲಿ ಲಭ್ಯವಿರುವ 1650ಚ.ಅಡಿಗಳ ಕೊಠಡಿಗಳನ್ನು ಕಾರ್ನಿಕ್ ಸಂಸ್ಥೆಯವರಿಗೆ ಹಸ್ತಾಂತರಿಸಲಾಗಿದೆ.

ಉದ್ಯೋಗ ಯೋಜನೆಯಡಿ ಹೊಸದಾಗಿ 06 ಧೀರ್ಘಾವಧಿ ವೃತ್ತಿಗಳನ್ನು ಹಾಗೂ 23 ಅಲ್ಪಾವಧಿ ವೃತ್ತಿಗಳನ್ನು 150 ಸಂಸ್ಥೆಗಳಲ್ಲಿ ಪ್ರಾರಂಭಿಸಲು ರಾಜ್ಯ ವೃತ್ತಿ ಶಿಕ್ಷಣ ಪರಿಷತ್‌ನಿಂದ ಸಂಯೋಜನೆಯನ್ನು ಬಿಡುಗಡೆಗೊಳಿಸಲಾಗಿದೆ. ಈ ಯೋಜನೆ ಅಡಿಯಲ್ಲಿ ಈ ಎಲ್ಲಾ 150 ಐ.ಟಿಐ. ಗಳಲ್ಲಿ 06 ವೃತ್ತಿಗಳ ಪೈಕಿ ಪ್ರತಿ ಸಂಸ್ಥೆಯಲ್ಲಿ 02 ವೃತ್ತಿಗಳನ್ನು ಪ್ರಾರಂಭಿಸಲಾಗಿದ್ದು, 2021ನೇ ಸಾಲಿಗೆ 150 ಸಂಸ್ಥೆಗಳಲ್ಲಿ 4433 ತರಬೇತಿದಾರರು ಪ್ರವೇಶ ಪಡೆದಿದ್ದಾರೆ. ಹಾಗೂ ಹೊಸ ದೀರ್ಘಾವಧಿ ವೃತ್ತಿಗಳಿಗೆ ಸಂಬಂಧಪಟ್ಟಂತೆ ಡಿ.ಜಿ.&ಟಿ. ಯಿಂದ NCVET ಅನುಮೋದನೆಯನ್ನು ನೀಡಲಾಗಿದೆ. ಹೊಸ ಪಠ್ಯಕ್ರಮವನ್ನು ಭೋಧಿಸಲು ಅನುಕೂಲವಾಗುವಂತೆ M/s.TATA Technologies Ltd.,ರವರ ವತಿಯಿಂದ ಅರ್ಹ ಬೋಧಕ ಸಿಬ್ಬಂದಿಗೆ ತರಬೇತಿಯನ್ನು ನೀಡಲಾಗಿರುತ್ತದೆ. 150 ಐ.ಟಿ.ಐ.ಗಳಲ್ಲಿ 02 ವರ್ಷಗಳ ಅವಧಿಗೆ ಪ್ರತಿ ಸಂಸ್ಥೆಗೆ ಇಬ್ಬರು ಹಾಗೂ 3ನೇ ವರ್ಷದಲ್ಲಿ ಪ್ರತಿ ಸಂಸ್ಥೆಗೆ ಒಬ್ಬರಂತೆ subject matter expert ಗಳನ್ನು ನಿಯೋಜಿಸಲು, ಉನ್ನತೀಕರಣದ ನಂತರದ 05 ವರ್ಷಗಳ ಅವಧಿಯವರೆಗೆ Annual Maintenance Cost

ಹೆಚ್ಚುವರಿ ಸೇವೆಯಾಗಿ ನೀಡಲು ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಅದರಂತೆ 300 subject matter expert ಗಳ ಪೈಕಿ 190 SME ಗಳು ವರದಿ ಮಾಡಿಕೊಂಡಿರುತ್ತಾರೆ.

150 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ 23 ಅಲ್ಪಾವಧಿ ವೃತ್ತಿಗಳ ಪೈಕಿ ಒಂದು ಅಥವಾ ಎರಡು ಅಲ್ಪಾವಧಿ ವೃತ್ತಿಗಳನ್ನು ಪ್ರಾರಂಭಿಸಲಾಗಿದೆ. ಹಾಗೂ ಮೊದಲನೇ ಬ್ಯಾಚ್‌ನಲ್ಲಿ ಒಟ್ಟಾರೆ 3355 ತರಬೇತಿದಾರರು ಪ್ರವೇಶ ಪಡೆದಿರುತ್ತಾರೆ.

M/s.TATA Technologies Ltd., ರವರೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಯಂತೆ ಆಧುನಿಕ ಯಂತ್ರೋಪಕರಣಗಳು, tools & equipment, hardware & Software, computers, Battery electric vehicle, ಇತ್ಯಾದಿಗಳನ್ನು 150 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಿಗೆ ಸರಬರಾಜು ಮಾಡಲಾಗಿದೆ.